**ಕಾಫಿ ಕುಡಿಯುತ್ತಾ ಇದ್ದ ಪ್ರಸಾದರ ಮನಸ್ಸು ಮತ್ತೆ ಗೀತಾಳತ್ತ ಹೊರಟಿತು. ಅವರಿಗೆ ಮೊದಲು ಹೊಳೆದದ್ದು – ಈಗ ಅವಳನ್ನು ಸಂಪರ್ಕಿಸಬಹುದು ಅಲ್ಲವೇ? ಫೇಸ್‌ಬುಕ್ಕಿನಲ್ಲಿ ಒಂದು ಮೆಸೇಜ್ ಕಳುಹಿಸಿದರೆ ಹೇಗಿರುತ್ತದೆ ಎಂದು ಯೋಚಿಸಿದರು.**

ವಯಸ್ಸು, ಗಂಡ ಹೆಂಡತಿ ಇಬ್ಬರೂ ನಿವೃತ್ತರಾಗಿದ್ದಾರೆ. ಮಕ್ಕಳ ಮದುವೆಗಳಾಗಿವೆ. ಮೂರು ಮೊಮ್ಮಕ್ಕಳೂ ಇದ್ದಾರೆ. ಮಕ್ಕಳಿಗೆ ಆದಷ್ಟು ಆಸ್ತಿಯನ್ನೂ ಮಾಡಿದ್ದಾರೆ.

ಸಿಡ್ನಿಗೆ ಬಂದು ನೆಲೆಸಿದ ನಲವತ್ತು ವರ್ಷಗಳಲ್ಲಿ ಪ್ರಸಾದರಿಗೆ ಗೀತಾಳ ನೆನಪು ಆಗಾಗ ಆಗುತ್ತಿತ್ತು. ಅವಳ ಬಗ್ಗೆ ಒಂದು ಬಗೆಯ ಮರುಕವೂ ರೂಪುಗೊಂಡಿತು. ಈಗ ಅವರು ಭಾರತ ಮತ್ತು ಆಸ್ಟ್ರೇಲಿಯಾಗಳಲ್ಲಿ ಕಡಿದು ಹೋದ ಅನೇಕ ಸಂಬಂಧಗಳನ್ನು ನೋಡಿದ್ದರು. ಕೆಲವು ಮದುವೆಗೆ ಮುಂಚೆ, ಕೆಲವು ಮದುವೆಯಾದ ನಂತರ. ಸಾಮಾನ್ಯವಾಗಿ ಎಲ್ಲವೂ ಶಾಂತರೀತಿಯಲ್ಲಿ ಆಗಿದ್ದವು. ತಮ್ಮ ಮಗ ವಿವೇಕ್ ಎರಡು ಹುಡುಗಿಯರೊಡನೆ ಡೇಟ್ ಮಾಡಿ ಮೂರನೆಯವಳನ್ನು ಮದುವೆಯಾಗಿದ್ದ. ವಾಣಿಯ ಮೊದಲ ಪ್ರೇಮಪ್ರಯತ್ನವೂ ವಿಫಲವಾಗಿತ್ತು. ಸಾಲದೆಂಬಂತೆ ಇವರಿಗೆ ತಿಳಿದಿದ್ದ ಫ್ರೆಂಚ್ ಮಹಿಳೆಯೊಬ್ಬಳು ತನ್ನ ಈಗಿನ ಗಂಡನನ್ನು ಪ್ಯಾರಿಸ್ಸಿನಲ್ಲಿ ಬಿಟ್ಟು, ಮಾಜಿ ಗಂಡನ ಜೊತೆ ಸಿಡ್ನಿಗೆ ಪ್ರವಾಸ ಬಂದಿದ್ದಳು. ವೀಣಾ ಅಮೆರಿಕದಲ್ಲಿ ನೆಲೆಸಿ ಅಲ್ಲಿಯೇ ಯಾರನ್ನೋ ಮದುವೆಯಾಗಿದ್ದರೂ ಪ್ರಸಾದರಿಗೆ ಇ–ಮೇಲ್ ಕಳುಹಿಸುತ್ತಿದ್ದಳು. ಪ್ರಸಾದ್ ಅವಳ ಊರಿಗೆ ಹೋದಾಗ ಮತ್ತು ಬೆಂಗಳೂರಿನಲ್ಲಿ ಅವಳನ್ನು ಭೇಟಿ ಮಾಡಿದ್ದೂ ಉಂಟು. ಇವುಗಳ ಹಿನ್ನೆಲೆಯಲ್ಲಿ ತಾವು ಮಾಡಿದ ಕೆಲಸವನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಎಂತಹ ಅಮಾನುಷ ವರ್ತನೆ! ನನ್ನ ಬುದ್ಧಿಗೆ ಏನಾಗಿತ್ತು? – ಎನಿಸುತ್ತಿತ್ತು. ಇವರಿಗೆ ಅನ್ನಿಸುತ್ತಿತ್ತು – ಎಂದೋ ಒಂದು ದಿನ ಗೀತಾ ಕೂಡ ನನಗೆ ಸಿಗಬಹುದು. ಅದು ಅಸಾಧ್ಯವೇನಲ್ಲ. ಸಿಕ್ಕಾಗ ಏನು ಮಾತಾಡುವುದು ಊಹಿಸಿಕೊಂಡರು. ಅವರಿಗೆ ಹೊಳೆದ ಒಂದೇ ಉತ್ತರ ಅವಳ ಕ್ಷಮೆ ಕೇಳಬೇಕು. ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕು. ಎಂದು ಸಿಗುವುದೋ ಇಂತಹ ಅವಕಾಶ ಎಂದು ಕಾಯುತ್ತಿದ್ದರು.

ನಲವತ್ತು ವರ್ಷಗಳ ನಂತರ ಈಗ ಆಕೆ ಕಂಪ್ಯೂಟರ್ ಪರದೆಯ ಮೇಲೆ ಪ್ರತ್ಯಕ್ಷಳಾಗಿದ್ದಾಳೆ. ಜೀವಂತ ಫೋಟೊ. ಅವಳು ಇಲ್ಲಿಯೇ ಮುಂದೆ ನಿಂತಿರುವಂತಿದೆ. ಇವರ ಕಣ್ಣುಗಳು ಹನಿಗೂಡಿದವು. ಅವಳು ಎಲ್ಲಿದ್ದಾಳೆ? ಏನು ಮಾಡುತ್ತಿದ್ದಾಳೆ? ತಿಳಿಯೋಣ ಎನಿಸಿತು. 'ಗೀತಾ ನಾಗರಾಜ್' ಎಂದು ಟೈಪ್ ಮಾಡಿದರು. ಅವಳ ಫೇಸ್‌ಬುಕ್ ಪುಟ ತೆರೆಯಬೇಕು. ಆಗ ಅವರ ಹೆಂಡತಿ ಹೊರಗಿನಿಂದ ಕೂಗಿದರು.

"ಫೋನ್ ಹೊಡಕೋತಾ ಇದೆ. ತೊಗೊಳ್ಳದೆ ಸುಮ್ನೆ ಕೂತಿದೀರಾ?"

ಹೌದು ಫೋನ್ ಹೊಡಕೋತಾ ಇತ್ತು. ಇವರು ಅದರತ್ತ ಓಡಿದರು. ಅದು ಮೌನವಾಯಿತು. ಕರೆ ಮಾಡಿದ್ದು ಯಾರು ಎಂದು ನೋಡಿದರು. ಅದೊಂದು ಪ್ರೈವೇಟ್ ನಂಬರ್ ಎಂದಿತ್ತು. ಯಾರೋ ಬೇಕಾದರೆ ಮತ್ತೆ ರಿಂಗ್ ಮಾಡ್ತಾರೆ ಎಂದು ಸುಮ್ಮನಾದರು. ಬಂದು ಕಂಪ್ಯೂಟರಿನಲ್ಲಿ ಫೇಸ್‌ಬುಕ್ ಕ್ಲೋಸ್ ಮಾಡಿದರು. ಇನ್ನೇನು ರೇವತಿ ಒಳಗೆ ಬರಬಹುದು. ಕಂಪ್ಯೂಟರಿನ ಮೇಲೆ ಇವಳ ಫೋಟೊ ಕಂಡರೆ ಏನೇನಾಗಬಹುದೋ!

ತಾವು ತೋಟದಲ್ಲಿ ಮಾಡುತಿದ್ದ ಕೆಲಸವನ್ನು ನಿಲ್ಲಿಸಿ ರೇವತಿ ಮನೆಯೊಳಗೆ ಬಂದು ವಿಚಾರಿಸಿದರು.